ಓ. ಎಸ್. 263/2006
ಪಿ. ಡಬ್ಲ್ಯೂ- 1

ಮಧ್ಯಂತರ ಆರ್ಜಿ ಸಂಖ್ಯೆಃ 15 ರಿಂದ 18 ರ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು.

**ದಿನಾಂಕಃ 30-10-2019 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ದೊಡ್ಡಪ್ಪ ನಾಗಚಾರ್ ಮತ್ತು ನನ್ನ ತಂದೆ ರಾಜಚಾರ್ ರವರು ವಿಭಾಗ ಮಾಡಿಕೊಂಡ ಬಗ್ಗೆ ದಿ.01-05-1983 ರ ಪಾಲುಪಟ್ಟಿಯನ್ನು ಹಾಜರುಪಡಿಸಿದ್ದು, ಅದು ನೋಂದಾಯಿತವಲ್ಲದೆ ಮತ್ತು ಸ್ಟಾಂಪ್ ನ್ನು ಹೊಂದಿರದೇ ಇದ್ದ ಕಾರಣ ವಾದಿಯು ಕೊರತೆ ಮುದ್ರಾಂಕ ಶುಲ್ಕವನ್ನು ಮತ್ತು ದಂಡವನ್ನು ಪಾವತಿ ಮಾಡಿದ್ದು, ಅದ್ದರಿಂದ ಈ ದಾಖಲೆಯನ್ನು ನಿಪಿ-18 ಎಂದು ಗುರ್ತಿಸಲಾಯಿತು. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಮೃತರಾಗಿರುತ್ತಾರೆ. ಅವರು ನಿಪಿ-18 ಕ್ಕೆ ಸಹಿ ಮಾಡಿದ್ದು, ಸದರಿ ಸಹಿಗಳನ್ನು ಸಾಕ್ಷಿಯು ಗುರ್ತಿಸಿದ್ದು, ಅವುಗಳನ್ನು ನಿಪಿ-18(ಎ) ಮತ್ತು 18(ಬಿ) ಎಂದು ಗುರ್ತಿಸಲಾಯಿತು. ನಿಪಿ-18 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ ಸಾಕ್ಷಿದಾರರು ಮೃತರಾಗಿರುತ್ತಾರೆ. ಅವರಲ್ಲಿ ನಾಗರಾಜಯ್ಯ, ಬಸವರಾಜಯ್ಯ ಮೃತರಾಗಿರುತ್ತಾರೆ. ಮತ್ತಿಬ್ಬರು ಸಹಿ ಮಾಡಿದ್ದು, ಅವರ ಸಹಿಗಳನ್ನು ನಾನು ಗುರುತಿಸಲು ಆಗಿರುವುದಿಲ್ಲ. ಮೃತ ನಾಗರಾಜಯ್ಯ ಮತ್ತು ಬಸವರಾಜಯ್ಯರವರ ಸಹಿಗಳನ್ನು ಸಾಕ್ಷಿಯು ಗುರ್ತಿಸಿದ್ದು, ಸದರಿ ಸಹಿಗಳನ್ನು ನಿಪಿ-18(ಸಿ) ಮತ್ತು ನಿಪಿ-18(ಡಿ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲಿಗೆ ಸಮಯಕೋರಿದ್ದು, ಮುಂದೂಡಲಾಯಿತು.**

(ಉಖ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒಪ್ಪಿದ್ದಾರೆ,

2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮಾಗಡಿ.